ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಉತ್ತರದಲ್ಲಿ ರಾವತನ ಹಳ್ಳಿ ಪ್ರಾಜೆಕ್ಟ್‌ನಿಂದ 1,672 ಎಕರೆ ಜಮೀನು ಆಬಾದಾಗುತ್ತದೆ ಎಂದು ತಿಳಿಸಿದ್ದೀರಿ. ಅದರಲ್ಲಿ ಸರಕಾರಿ ಜಮೀನೆಷ್ಟು ಮತ್ತು ಖಾಸಗಿಯವರ ಜಮೀನೆಷ್ಟು ಇದೆ ?

†ಶ್ರೀ ಡಿ. ಪರಮೇಶ್ವರಪ್ಪ.—ಒಟ್ಟು ನೀರಾವರಿಯಾಗುವುದು 1032 ಎಕರೆ. 640 ಎಕರೆಯಲ್ಲಿ ಎರಡು ಬೆಳೆ ಬೆಳೆಯುವುದಕ್ಕೆ ಅನುಕೂಲ ಮಾಡಬೇಕೆಂದು ಎಸ್ಟಿಮೇಟಿನಲ್ಲಿ ನಮೂದಾಗಿದೆ. The Total extent is not 1672 acres as the Hon'ble member presumes.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಆದರಲ್ಲಿ ಸರಕಾರದ ಜಮೀನೆಷ್ಟು ? ಖಾಸಗಿಯವರ ಜಮೀನೆಷ್ಟು ?

Sri D. PARAMESWARAPPA.—That information is not available.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಗೋರೂರು ಅಣೆಕಟ್ಟಿನಿಂದ ಮುಳುಗಡೆಯಾಗತಕ್ಕ ಶೆಟ್ಟರ ಹಳ್ಳಿ, ತಡನನಹಳ್ಳಿ ಮೊದರಾದ ಗ್ರಾಮಗಳಲ್ಲಿ ಅನೇಕ ರೈತರು ತಮ್ಮ ಜಮೀನುಗಳನ್ನು ಕಳೆದುಕೊಳ್ಳುವುದರಿಂದ ಅವರಿಗೆ ಬೇರೆ ಜಮೀನು ಕೊಡುವುದಕ್ಕೆ ಸಹಾಯ ಮಾಡುತ್ತೀರಾ ? ಮತ್ತು ಇನ್ನೂ 30 ಅಡಿ ಹೆಚ್ಚು ಮಾಡಿದರೆ ಇನ್ನೂ ಒಂದು ಸಾವಿರ ಎಕರೆ ಆಬಾದು ಆಗುವುದರಿಂದ ಆ ಜಮೀನನ್ನು ಈ ರೈತರಿಗೆ ಕೊಡುವುದರಿಂದ ಸಹಾಯ ಮಾಡಿದಂತಾಗುತ್ತದೆ, ಇದನ್ನು ದಯವಿಟ್ಟು ಯೋಚನೆ ಮಾಡುತ್ತೀರಾ ?

Sri D. PARAMESWARAPPA.—The work has been put to tender. The tenders are being finalised. This is only a fresh proposal and this can be investigated by the concerned Department.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಇದು ಹೊಸ ಪ್ರಪೋಸಲ್ ಅಲ್ಲ. ಈ ಸಂದರ್ಭದಲ್ಲಿ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಇನ್ನೂ ಒಂದು 30 ಅಡಿ ಎತ್ತರಿಸಿ ಎಂದು ಕೇಳುತ್ತಾ ಇದ್ದೇನೆ. ಮತ್ತು ಜಮೀನು ಮುಳುಗಡೆಯಾಗುವವರಿಗೆ ಜಮೀನು ಕೊಡಲು ಆದ್ಯತೆ ಕೊಡುತ್ತೀರಾ ಎನ್ನುವುದು ನನ್ನ ಪ್ರಶ್ನೆ.

Sri D. PARAMESWARAPPA.—That will be examined.

Sri H. N. NANJE GOWDA.—What is the Head level of the project and what is the horse power suggested and what is the total money for the project calculated to irrigate 1032 acres.

Sri D. PARAMESWARAPPA.—Notice Sir.

Director of Medical Service's visit to Hospitals in Raichur District

139. Sri SADASHIVAPPA PATIL (Deodurg).—

Will the Minister for Health be pleased to state :—

the number of times the Director of Medical Services visited Health Units and Civil Hospitals in the years 1966-67 and 1967-68 in Raichur District ?

A.—Sri G. BASAVANNAPPA (Deputy Minister for Health).—

Once during 1966-67 and once in 1967-68.

ಶ್ರೀ ಸದಾಶಿವಪ್ಪ ಪಾಟೀಲ್.—66-67 ರಲ್ಲಿ ಒಂದು ಬಾರಿ, 67-68 ರಲ್ಲಿ ಒಂದು ಬಾರಿ ಎಂದು ಹೇಳಿದ್ದೀರಿ. ಇದು ಯಾವ ಬಾರಿ, ಎಲ್ಲ ಬಾರಿ ಸ್ವಲ್ಪ ದಯವಿಟ್ಟು ತಿಳಿಸುತ್ತೀರಾ ?

† ಶ್ರೀ ಜಿ. ಬಸವಣ್ಣಪ್ಪ.—66—67 ರಲ್ಲಿ ಡೈರೆಕ್ಟರ್ ಆಫ್ ಹೆರ್ತ್ ಸರ್ವಿಸಸ್‌ರವರು 15-1-67 ರಿಂದ 19-1-67 ರ ವರೆಗೂ 5 ದಿವಸದ ಪ್ರೋಗ್ರಾಂನಲ್ಲಿ ರಾಯಚೂರು ಜಿಲ್ಲಾ ಆಸ್ಪತ್ರೆ ಮತ್ತು ಅದರ ಸುತ್ತುಮುತ್ತಲೂ ಇರತಕ್ಕ ಪ್ರದೇಶಗಳನ್ನು ಇನ್‌ಸ್ಪೆಕ್ಷನ್ ಮಾಡಿದ್ದಾರೆ. 67-68 ರಲ್ಲಿ 19-6-68 ರಿಂದ 21-6-68 ರ ವರೆಗೆ ಸಿಂಧನೂರು, ಮಾನ್ವಿ, ರಾಯಚೂರು ಜಿಲ್ಲಾ ಆಸ್ಪತ್ರೆಯನ್ನು ಇನ್‌ಸ್ಪೆಕ್ಷನ್ ಮಾಡಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀಲ್.—67-68 ರಲ್ಲಿ ಒಂದು ಸಾರಿ ರಾಯಚೂರು ಆಸ್ಪತ್ರೆಗೆ ಭೇಟಿ ಕೊಟ್ಟಾಗ ಅವರು ರಾಯಚೂರು ಆಸ್ಪತ್ರೆ ಬಗ್ಗೆ ಏನು ಅನುಭವ ಕಂಡುಹಿಡಿದರು ಮತ್ತು ಅಲ್ಲಿ ಏನು ಸಮಸ್ಯೆ ಬಗೆಹರಿಸಿದರು? ಏಕೆಂದರೆ ರಾಯಚೂರು ಸಿವಿರ್ ಹಾಸ್ಪೆಟರ್‌ನಲ್ಲಿ ಸುಮಾರು ಎರಡು ವರ್ಷದಿಂದ ಎಕ್‌ಸರೇ ಪ್ಲಾಂಟ್ ಕೆಲಸ ಮಾಡುತ್ತಿಲ್ಲ, ಮತ್ತು ಆಕ್ಸಿಜನ್ ಸಿಲಿಂಡರ್ಸ್ ಇಲ್ಲ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ಬಸವಣ್ಣಪ್ಪ.—ಎಕ್ಸ್‌ರೇ ಪ್ಲಾಂಟ್ ರಾಯಚೂರು ಜಿಲ್ಲಾ ಆಸ್ಪತ್ರೆಯಲ್ಲಿ ಒಂದರಲ್ಲಿ ಮಾತ್ರ ಕೆಟ್ಟಿಲ್ಲ, ಇನ್ನೂ ಕೆಲವು ಕಡೆ ಕೆಟ್ಟಿದೆ. ಅದರ ಬಗ್ಗೆ ಸರ್ಕಾರದವರು ಒಂದು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿ ಡಿವಾರ್ಟ್‌ಮೆಂಟ್ ಮುಖಾಂತರವೇ ರೀಪೇರಿ ಮಾಡುವಂತಹ ಒಂದು ವ್ಯವಸ್ಥೆಯನ್ನು ಆದಷ್ಟು ಬೇಗ ಕೈಕೊಳ್ಳಲು ಇಚ್ಛಿಸಿದ್ದೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈಗ ನನಗೆ ತಿಳಿದಮಟ್ಟಿಗೆ ಈ ಡೈರೆಕ್ಟರ್ ಸಾಹೇಬರು ನಾನ್ ಆಫಿಷಿಯಲ್ಸ್ ಏನೊಂದು ಸಮಸ್ಯೆಯನ್ನು ಅವರು ಮುಂದೆ ಇಟ್ಟರೂ ಅದನ್ನು ಕಿವಿಗೇ ಹಾಕಿಕೊಳ್ಳುವುದಿಲ್ಲ. ಆದ್ದರಿಂದ ರಾಜ್ಯ ಸರ್ಕಾರದವರು ಇವರನ್ನು ಕೇಂದ್ರಕ್ಕಾದರೂ ಕಳುಹಿಸುವ ವ್ಯವಸ್ಥೆ ಮಾಡುತ್ತಿರಾ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಡೈರೆಕ್ಟರ್‌ರವರು ಈ ಸಭೆಯ ಸದಸ್ಯರಿಗೆ ಆ ಗೌರವವನ್ನು ತೋರಿಸುವಂತಹ ವಾತಾವರಣ ಕಂಡುಬಂದಿಲ್ಲ, ಹಾಗೇನಾದರೂ ಕಂಡುಬಂದ ಪಕ್ಷದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

Sri C. CHANDRAKANTH.—Has it come to the notice of the Government that there are complaints against the Director of Medical Services with respect of his rude behaviour to the Legislators and that he does not go on tours?

Sri G. BASAVANNAPPA.—There are no definite rules that he has to undertake tour. In any case, if there is any urgent need, he will undertake tour.

ಶ್ರೀ ಎಂ. ನಾಗಪ್ಪ.—ಮಾನ್ಯ ಮಂತ್ರಿಗಳು ಈಗತಾನೆ ಅಪ್ಪಣೆ ಕೊಡಿಸಿದಂತೆ ಈ ಇಲಾಖೆಯ ಮೊಕ್ತೇಸರರಿಗೆ ಇತರೇ ಇಲಾಖೆಗಳ ಮೊಕ್ತೇಸರರಿಗಿದ್ದಂತೆ ಟೂರ್ ಮಾಡತಕ್ಕ ಅಗತ್ಯವಾಗಲಿ ಅಥವಾ ಅವರ ಟೂರ್ ಮಾಡಲೇಬೇಕೆಂಬ ಬಗ್ಗೆ ಯಾವ ರೂಲ್ಸ್‌ಗಳೂ ಇರುವುದಿಲ್ಲ ಎಂಬುದಾಗಿ ಹೇಳಿದರು. ಆದರೆ ಈ ಇಲಾಖೆಯ ಮೊಕ್ತೇಸರರೇ ನೇಮಕ ಮಾಡಿರತಕ್ಕ ಕೆಲವು ಸಮಿತಿಗಳಿವೆ. ಅಂಥ ಒಂದು ಸಮಿತಿಯನ್ನು ಇವರೇ ಕರೆದಿದ್ದು ಆ ಸಮಿತಿಯು ವಿಸಿಟ್ ಮಾಡಿದ್ದರೂ ಅದರ ವಿಸಿಟಿಂಗಿಗೆ ಇವರು ಬಾರದೆ ಆ ಸಮಿತಿಯನ್ನು ಮುಂದೂಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅವರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ?

ಶ್ರೀ ವೈ. ರಾಮಕೃಷ್ಣ (ಆರೋಗ್ಯ ಶಾಖೆಯ ಮಂತ್ರಿಗಳು):—ಹೆರ್ತ್ ಡೈರೆಕ್ಟರವರು ತಿಂಗಳಲ್ಲಿ 10 ದಿವಸ ಟೂರ್ ಮಾಡಬೇಕೆಂಬ ನಿಯಮ ಇಲ್ಲ. ಅವರಿಗೆ ಆ ವೇಳೆಯಲ್ಲಿ ಟೂರ್ ಹೋಗುವುದಕ್ಕೆ ಅನಾನುಕೂಲವಿದೆ ಎಂದಾಗ ಅವರು ಅವರ ಪರವಾಗಿ ಜಾಯಿಂಟ್ ಡೈರೆಕ್ಟರನ್ನು ಟೂರ್ ಮಾಡಲು ಕಳುಹಿಸಬಹುದು. ಆ ನಿಯಮದ ಪ್ರಕಾರ ಅವರು ಜಾಯಿಂಟ್ ಡೈರೆಕ್ಟರನ್ನು ಎರಡಾವರ್ತಿ ಟೂರ್ ಮಾಡಲು ಕಳುಹಿಸಿದ್ದಾರೆ. ಇನ್ನು ಶಾಸನ ಸಭೆಯ ಸದಸ್ಯರನ್ನು ಅವರು ಗೌರವದಿಂದ ಕಾಣಲಿಲ್ಲ ಎಂಬ ದೂರನ್ನು ಇಲ್ಲಿ ಈಗ ಹೇಳುತ್ತಿದ್ದಾರೆ. ಅಂಥ ನಿದರ್ಶನಗಳಿದ್ದರೆ ಅವರು ಅವುಗಳನ್ನು ನನ್ನ ಗಮನಕ್ಕೆ ತರಲಿ ವಿಚಾರ ಮಾಡುತ್ತೇನೆ.

(Some Hon'ble Members were standing)

Mr. SPEAKER.—When the Minister is yet to finish his reply, the Hon'ble mambers should not stand and disturb. Is it fair to do like that? Let him finish his reply and then only the supplementaries will be permitted.

HON. MEMBER.—Hon. Minister has furnished his reply.

Mr. SPEAKER.—Has the hon'ble Minister finished his reply.

Sri Y. RAMAKRISHNA.—Yes, Sir.

Sri M. NAGAPPA.—I have brought to the notice of Hon'ble Minister that a meeting of the Board of Visitors was called for and the Board was to be addressed by the Director of Medical Services. All the members of the Board went to the Hospital and there were no body. Neither the District Surgeon was there not the Director or Medical Services was there. It was learnt that he had cancelled the meeting and went away. This is the state of affairs. What is the action you are going to take against this individual for these attitude?

Sri Y. RAMAKRISHNA.—I well enquir into the matter and take action.

1-00 P.M.

Sri D. B. KALMANKAR.—May I know any suitable instructions have been issued to the Director to see the patients and take first hand information regarding the affairs prevailing in the hospitals?

Sri Y. RAMAKRISHNA.—Instructions have been issued.

Sri B. P. GANGADHAR.—Is the Government aware that this particular Director has two types of tours, one official tour and another unoffical tour. May I know the circumstances under which he undertakes unofficial tours using the official conveyance etc., during that particular period?

Mr. SPEAKER.—The supplementary is disallowed.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಬಹಳ ಸಿಟ್ಟಿನಿಂದ ಮಾನ್ಯ ಸದಸ್ಯರು ಅವರಿಗೆ ಅಗೌರವ ವಾಗಿದೆಯೆಂದು ಹೇಳಿದರು. ಯಾವ್ಯಾವ ರೂಪದಲ್ಲಿ ಅವರಿಗೆ ಅಗೌರವವಾಗಿದೆಯೆಂಬುದನ್ನು ವಿಚಾರ ಮಾಡಿದ್ದೀರಾ?

ಶ್ರೀ ವೈ. ರಾಮಕೃಷ್ಣ.—ಯಾವ ರೀತಿ ಅಗೌರವವಾಗಿದೆಯೆಂಬ ಬಗ್ಗೆ ನನಗೆ ವರದಿ ಬಂದಿಲ್ಲ. ಆದೇನಾದರೂ ಬಂದಿದ್ದರೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಆ ಡೈರೆಕ್ಟರ್‌ಗೆ ನಿಮ್ಮ ಉಪಮಂತ್ರಿಗಳು ಏನೇನೋ ಹೇಳಿ ಒಂದು ಟ್ರಾನ್ಸ್‌ಫರ್ ವಿಷಯದಲ್ಲಿ ಅವರು ಅಗುವುದಿಲ್ಲವೆಂದು ಹೇಳಿದಮೇಲೆ ಅವರು ತಮ್ಮ ಬಳಿ ಬಂದು ದೂರು ಅವರ ಮೇಲೆ ಹೇಳಲಲ್ಲವೇ?

ಶ್ರೀ ಬಿ. ಪಿ. ಗಂಗಾಧರ್.—ಅಲ್ಲಿ ಅವರು ಲಂಚ ತೆಗೆದುಕೊಳ್ಳುತ್ತಾರೆಂಬುದು ಮನೆ ಮಾತಾಗಿದೆ.*****

(ಉತ್ತರವಿಲ್ಲ)

***** Matter not recorded as ordered by the Chair.

Mr. SPEAKER.—ಮಾನ್ಯ ಸದಸ್ಯರ ಭಾಷಣವನ್ನು ರಿಕಾರ್ಡ್ ಮಾಡಬೇಡಿ. The question is regarding the visit of the Director to Raichur District. If the Hon'ble Members have any grievances regarding the working of the Medical Directorate that could be discussed during the debate on the Governor's Address. But during question hour such matters should not be raised.

Sri H. N. NANJE GOWDA.—Sir, was there any occasion wherein the Deputy Minister for Health reported to the Minister for Health regarding the non-compliance of the request made by him to the Director ?

Sri Y. RAMAKRISHNA.—There was no such occasion.

ಶ್ರೀ ಎನ್. ಬಂಗಾರಪ್ಪ.—ಸ್ಪೀಮ್, ಈ ಡೈರೆಕ್ಟರ್ ಆಫ್ ದಿ ಮೆಡಿಕರ್ ಮೇಲೆ ಆಪಾದನೆಗಳು ಬಹಳವಾಗಿವೆ. ಅವರ ಹತ್ತಿರ ಹೋದರೆ ಅವರು ಮೆಂಬರುಗಳ ಹತ್ತಿರ ಮಾತನಾಡುವಾಗ ಒಂದು ರೀತಿ ನ್ಯೂರ್ತಿಯಲ್ಲಿ ನಡೆದುಕೊಳ್ಳುತ್ತಾರೆ. ಅದಕ್ಕೆ ಎರಡು ಕಾರಣಗಳಿವೆ. ಒಂದು ಅವರು ಭಾರತದ ಉಪರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರಿಗೆ ಹತ್ತಿರದ ಸಂಬಂಧಿಯಾಗಿರುವುದು ಇನ್ನೊಂದು ಮಾನ್ಯ ಆರೋಗ್ಯ ಮಂತ್ರಿಯವರ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಉಪ ಪ್ರಶ್ನೆ ಕೇಳಬೇಕು.

ಶ್ರೀ ಎನ್. ಬಂಗಾರಪ್ಪ.—ಮಾನ್ಯ ಮಂತ್ರಿಯವರು ಹೇಳಿದರು ಒಂದು ತಿಂಗಳಲ್ಲಿ 10 ದಿವಸ ಪ್ರವಾಸ ಮಾಡುವುದಕ್ಕೆ ನಿಯಮ ಇದೆ ಎಂದು. ಮಾನ್ಯ ಉಪಮಂತ್ರಿಯವರು ಹೇಳುತ್ತಾರೆ, ಏನೂ ನಿಯಮವಿಲ್ಲ, ಎಂದು. ಅಂದರೆ, ಇವರ ಉತ್ತರದಲ್ಲಿ ಒಂದಕ್ಕೊಂದು ಸಂಬಂಧವಿಲ್ಲ. ಆದ ಕ್ಕಾಗಿ ಈ ಎರಡು ಜನಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕ್ರಮವನ್ನು ತೆಗೆದುಕೊಳ್ಳಬೇಕು, ಮತ್ತು ಡೈರೆಕ್ಟರನ್ನು ಮೊದಲು ನಿವೃತ್ತಿ ಮಾಡಬೇಕು ಮತ್ತು ಡಿಪ್ಯೂಟಿ ಮಂತ್ರಿಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವೀರೇಂದ್ರ ಪಾಟೀಲ್. (ಮುಖ್ಯಮಂತ್ರಿಗಳು).—ಬಹುಶಃ ಇದು ಬಹಳ ಚರ್ಚೆಯಾಯಿತು ಎಂದು ನನಗನ್ನಿಸುತ್ತದೆ. ಹೆಲ್ತ್ ಡಿವಾರ್ಟ್‌ಮೆಂಟ್ ಬಜೆಟ್ ಬಂದಾಗ್ಗೆ ಇದನ್ನು ಚರ್ಚೆ ಮಾಡಬಹುದೆಂದು ನನಗನಿಸುತ್ತದೆ. ನಾನು ಮಾನ್ಯ ಸದಸ್ಯರಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಅವರು ನರಿಯಾಗಿ ವರ್ತನೆ ಮಾಡುವುದಿಲ್ಲ, ಅವರ ಬಿಹೇವಿಯರ್ ಚೆನ್ನಾಗಿಲ್ಲ ಎಂದು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಒಬ್ಬಿಬ್ಬರು ಮಾನ್ಯ ಸದಸ್ಯರು ದುಡ್ಡು ಇಲ್ಲದೆ ಏನೂ ಕೆಲಸ ಆಗುವುದಿಲ್ಲ. ಟ್ರಾನ್ಸ್‌ಫರ್ ಮಾಡಿಸಬೇಕಾದರೂ ಅಥವಾ ಟ್ರಾನ್ಸ್‌ಫರ್ ಆಗಿದ್ದುದನ್ನು ಕ್ಯಾನ್ಸರ್ ಮಾಡಿಸಬೇಕಾದರೂ ದುಡ್ಡು ಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಒಂದು ವಿಚಾರವನ್ನು ತಾವು ಗಮನದಲ್ಲಿ ಇಡಬೇಕು. ನಮ್ಮ ಸರ್ಕಾರದಲ್ಲಿ ಕೆಲಸ ಮಾಡತಕ್ಕ ನೌಕರರು ಏನಿದ್ದಾರೆ ಅವರು ಸಣ್ಣ ಅಧಿಕಾರಿಗಳಾಗಲೀ ಅಥವಾ ಉನ್ನತ ಅಧಿಕಾರಿಗಳಾಗಲೀ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ಕೆಲವು ರೂಲ್ಸ್ ಮತ್ತು ರೆಗ್ಯುಲೇಷನ್‌ಗಳು ಇವೆ. ಅದನ್ನು ಬಿಟ್ಟು ಏನೋ ಮಾನ್ಯ ಸದಸ್ಯರು ಹೇಳಿದ್ದಾರೆ ಎಂದು ಒಂದು ಆರ್ಡರನ್ನು ಪಾಸು ಮಾಡಿದರೆ ನಮಗೂ ಕೇಳುವವರು ಇದ್ದಾರೆ. ಕೋರ್ಟಿನಲ್ಲಿ ಹಾಲವ್ ಆಗುವ ಪರಿಸ್ಥಿತಿ ಬರುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ನಿಮ್ಮ ಕೈಯಲ್ಲಿ ಏನೂ ಆಗುವುದಿಲ್ಲ ಎಂದು ನಾವು ತಿಳಿದುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಅಧಿಕಾರಿಗಳು ಹೆಗ್ಗಣಗಳಾಗಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಬಹಳ ಆವೇಶದಿಂದ ಮಾತನಾಡುತ್ತಿದ್ದಾರೆ.

Sri B. P. GANGADHAR.—I am sorry you are pleading your inability. Put me there, you will see how I will act. On the floor of the House you have been pleading your inability. (* * * *)

(Interruption from Opposition Benches)

Mr. SPEAKER.—If members behave like this, I will have to say : Question hour is over.

Sri H. SIDDAVEERAPPA.—Question hour may be over. But the Chief Minister's statement is not over.

Mr. SPEAKER.—If the Hon. member Sri Siddaveerappa wants that the Chief Minister should complete his statement, I have no objection, provided Members listen to him without interruptions.

Sri H. SIDDAVEERAPPA.—Perhaps the Hon'ble Member Sri Gangadhar is feeling so intensely about it. May be that he is not able to control his feelings. After all human beings are not made alike. You have to bear with it to some extent.

(*at this stage the Hon'ble Minister Sri G. B. Shankar Rao said : Ho! Ho!*)

Sri H. SIDDAVEERAPPA.—Not Ho ! Ho ! You should not behave like that. You are a responsible Minister behaving in the most irresponsible manner. You should not behave like that.

Sri K. H. PATIL.—I raise a privilege motion here Sir.

Sri VATAL NAGARAJ.—On a point of order Sir. ನಾನು ಹೇಳುವುದನ್ನು ಸ್ವಲ್ಪ ತಾಪು ಕೇಳಬೇಕು. ತಮಗೆ ಬಲಕಿವಿ ಮಾತ್ರ ಕೇಳಿನುತ್ತದೆ, ಎಡಕಿವಿ ಕೇಳಿನುವುವಿಲ್ಲ.

ಅಧ್ಯಕ್ಷರು.—ಏನು ತಾವು ಹೇಳುವುದು ?

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸಿದ್ದವೀರಪ್ಪನವರು ಮಾತನಾಡುತ್ತಿದ್ದಾಗ ಮಾನ್ಯ ಮಂತ್ರಿಗಳಾದ ಶ್ರೀ ಜಿ. ಬಿ. ಶಂಕರರಾವ್ ಅವರು ತಮ್ಮ ಜವಾಬ್ದಾರಿ ಏನು ಎಂಬುದನ್ನು ಮರೆತು, ಈ ಮಾನ್ಯ ಸಭೆಯನ್ನು ಹಳ್ಳಿಚಾವಡಿ ಎಂದು ತಿಳಿದುಕೊಂಡು 'ಓಹೋ' ಎಂದು. * ***

Sri K. H. PATIL.—I am raising a point of order.

(ನಾಲ್ಕೈದು ಜನ ಸದಸ್ಯರುಗಳು ಎದ್ದು ಮಾತನಾಡಲು ಪ್ರಾರಂಭಿಸಿದರು).

Mr. SPEAKER.—In the confusion that was there, I did not hear what the Hon'ble Minister said. I am appealing to all the members. To maintain a peaceful atmost here. Let everybody be heard.

ಶ್ರೀ ವಾಟಾಳ್ ನಾಗರಾಜ್.—ಮೊದಲು ಮಾನ್ಯ ಮಂತ್ರಿಗಳು ಸಭೆಯ ಅವಾಲಜಿ ಕೇಳ ಬೇಕು.

Sri VEERENDRA PATIL.—If I am allowed to continue and complete my statement, I will proceed.

Mr. SPEAKER.—I am making one request. If the Hon'ble Chief Minister wants to complete his statement, I have no objection provided there is no interruption. If this sort of confusion were to prevail, what is the use ? Does it conduse to the decorum and dignity of the House ?

**** Matter not recorded as ordered by the Chair.

Sri K. H. PATIL.—If the Chief Minister is permitted to complete his statement, then I will lose the opportunity of raising my privilege motion.

(Interruptions from Opposition Benches)

Mr. SPEAKER.—If Hon. members proceed in this manner, I shall have to adjourn the House. The House will now adjourn and meet after half-an-hour.

QUESTIONS FOR ANSWERS ON THE DAY
(but not taken up)
I. P. Sets

25. Sri T. K. GANGI REDDY (Chintamani).—

Will the Minister for Development be pleased to state :—

(*a*) the total number of applications for sanction of I.P. sets received by the Central Land Development Bank from all the Primary Land Development Banks in the State ;

(*b*) Out of them the number of applications sanctioned (Districtwise details may please be furnished) ?

Sri P. M. NADGOUDA (Minister for Development).—

(*a*) and (*b*) 1615 and 1030 respectively.

Districtwise details :

Name of the District		*Applications received*	*Applications sanctioned*
Bangalore	...	139	111
Chitradurga	...	41	28
Kolar	...	537	117
Shimoga	...	35	29
Tumkur	...	170	153
Chikkamagalur	...	37	30
Coorg	...	4	...
Hassan	...	24	19
Mandya	...	36	21
Mysore	...	137	116
South Kanara	...	15	15
Belgaum	...	96	91
Bijapur	...	86	80
Dharwar	...	48	32
North Kanara	...	...	...
Bellary	...	32	30
Bidar	...	76	66
Gulbarga	...	23	13
Raichur	...	79	79
Total	...	1,615	1,030